# ವಿಜ್ಞಾನಿಗಳ ಸಂಶೋಧನೆಗಳಲ್ಲಿ, ವಿಚಾರಗಳಲ್ಲಿ ವೇದಾಂತ

ಶಿವಮೊಗ್ಗದ ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ ಲೇಖಕರು ಪ್ರಸಿದ್ಧ ವಿಜ್ಞಾನಿಗಳ ಚಿಂತನೆಗಳಲ್ಲಿ ವೇದಾಂತದ ಪ್ರಭಾವವನ್ನು ಗುರುತಿಸಿದ್ದಾರೆ.

ಡಾ. ಎನ್. ಬಿ. ದೇಸಾಯಿ

**ಸ್ವಾ**ಮಿ ವಿವೇಕಾನಂದರ ಅಭಿಪ್ರಾಯದಲ್ಲಿ ಜಗತ್ತಿನ ಧರ್ಮಗಳಲ್ಲಿ ಯಾವ ಧರ್ಮವು ವೈಜ್ಞಾನಿಕ ದೃಷ್ಟಿಯನ್ನು ಹೊಂದಿರುವುದೋ ಅಂತಹ ಧರ್ಮವನ್ನು ಮಾತ್ರ ಮಾನವತೆ ಸ್ವೀಕರಿಸಬೇಕು. ವಿಜ್ಞಾನವು ಬಾಹ್ಯ ಜಗತ್ತಿನ ಅಧ್ಯಯನದ ಮೂಲಕ ಸತ್ಯವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತದೆ. ಅಂತರಂಗದ ಜಗತ್ತಿನ ಅಧ್ಯಯನವು ಧರ್ಮದ ಗುರಿ. ಸತ್ಯವು ಒಂದೇ ಆಗಿರಲು ಸಾಧ್ಯವಾದ್ದರಿಂದ ಇವೆರಡೂ ಮಾರ್ಗಗಳು ಕಡೆಯಲ್ಲಿ ಒಂದೇ ಗುರಿಯನ್ನು ತಲುಪಬೇಕು. ಸನಾತನ ಧರ್ಮದ ವೇದಾಂತದ ವಿಚಾರಗಳು ಮತ್ತು ಸಂಶೋಧನಾತ್ಮಕ ವಿಜ್ಞಾನವು ಒಂದಕ್ಕೊಂದು ಪೂರಕವಾಗಿವೆ ಎಂಬ ಕುತೂಹಲಕಾರಿಯಾದ ಅಂಶವನ್ನು ತಿಳಿಸುವ "ಸ್ವಾಮಿ ವಿವೇಕಾನಂದರು ಮತ್ತು ಸಮಕಾಲೀನ ವಿಜ್ಞಾನಿಗಳು" ಎಂಬ ಲೇಖನವು ಈ ಪತ್ರಿಕೆಯಲ್ಲಿ ಹಿಂದೆ ಪ್ರಕಟವಾಗಿತ್ತು **(ವಿವೇಕ ಪ್ರಭ,** ಆಗಸ್ಟ್ ೨೦೦೧, ಪು.೧೨ –೧೪). ಆ ಲೇಖನದಲ್ಲಿ ನಾನು ಉಲ್ಲೇಖಿಸಿದ್ದ ವಿಜ್ಞಾನಿಗಳು ೧೯ನೇ ಶತಮಾನದ ಪೂರ್ವಾರ್ಧದವರು. ಈಗ ೧೯ನೇ ಶತಮಾನದ ಉತ್ತರಾರ್ಧದ ಹಾಗೂ ೨೦ನೇ ಶತಮಾನದ ವಿಜ್ಞಾನಿಗಳ ವಿಚಾರಗಳನ್ನು ತಿಳಿಸುತ್ತಿರುವೆ.



## ೧. ಡಾ. ಮಹೇಂದ್ರಲಾಲ್ ಸರ್ಕಾರ್

(೧೮೩೩–೧೯೦೪)

ಸುಪ್ರಸಿದ್ಧ ಹೋಮಿಯೋಪತಿ ವೈದ್ಯರಾದ ಮಹೇಂದ್ರಲಾಲ್, ಶ್ರೀರಾಮಕೃಷ್ಣರು ತಮ್ಮ ಜೀವನದ ಕೊನೆಯ ಭಾಗದಲ್ಲಿ ಕ್ಯಾನ್ಸರ್ ವ್ಯಾಧಿಯಿಂದ ಬಳಲುತ್ತಿದ್ದಾಗ, ಚಿಕಿತ್ಸೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಆಗ ಸರ್ಕಾರರ ವಯಸ್ಸು ಸುಮಾರು ೪೩. ಪಾಶ್ಚಾತ್ಯ ವಿಚಾರಗಳ ಹಾಗೂ ಬ್ರಹ್ಮಸಮಾಜದ ಚಿಂತನೆಯ ಗಾಢ ಪ್ರಭಾವಕ್ಕೆ ಒಳಗಾಗಿದ್ದರು. ಧಾರ್ಮಿಕ ಹಾಗೂ ಆಧ್ಯಾತ್ಮಿಕ ವಿಚಾರಗಳಲ್ಲಿ ತಮ್ಮದೇ ನಿಶ್ಚಿತ ಅಭಿಪ್ರಾಯಗಳನ್ನು ಹೊಂದಿದ್ದರೂ, ಅವರದು ತೆರೆದ ಮನಸ್ಸು. ಅವರು ಸತ್ಯಾನ್ವೇಷಣೆಯ ಬುದ್ಧಿಯುಳ್ಳವರು. ರಸಾಸ್ವಾದಕರು, ಕನಸುಗಾರರು, ಆದರೆ ಭಾವುಕರಲ್ಲ. ಇಂತಹ ಬಹುಮುಖ ಪ್ರತಿಭೆಯ ವ್ಯಕ್ತಿ ಶ್ರೀರಾಮಕೃಷ್ಣರ ಸಂಪರ್ಕಕ್ಕೆ ಬಂದದ್ದೇ ಮಹತ್ವದ ಸಂಗತಿ. ಇವರು ಶ್ರೀರಾಮಕೃಷ್ಣರೊಂದಿಗೆ ನಡೆಸುತ್ತಿದ್ದ ಸಂಭಾಷಣೆಗಳು ಸ್ವಾರಸ್ಯಕರ ಹಾಗೂ ಬೋಧಪ್ರದ. ಇಂತಹ ಕೆಲವು ನೋಟಗಳನ್ನು ಇಲ್ಲಿ ಸವಿಯೋಣ.

**ಅ) ಒಂದು ಸಂದರ್ಭ:** "ತಾಯಿ ದುರ್ಗೆಯ ನಿಜವನರಿತ ಧೀರರಾರೋ ಜಗದೊಳು" ಎಂಬ ಭಕ್ತಿಪ್ರಚೋದಕವಾದ ಹಾಡನ್ನು ಕೇಳುತ್ತ ಕಾಶಿಪುರ ತೋಟದ **(ಕೊಲ್ಕತಾ)** ಮನೆಯಲ್ಲಿ ನೆರೆದಿದ್ದ ಭಕ್ತರೆಲ್ಲ ತನ್ಮಯರಾಗಿದ್ದರು. ಒಂದಿಬ್ಬರು ಯುವ ಶಿಷ್ಯರು ಭಾವಾವೇಶದಿಂದ ಪ್ರಜ್ಞೆಯನ್ನು ಕಳೆದುಕೊಂಡಿದ್ದರು. ಅದನ್ನು ಕಂಡ ಸರ್ಕಾರರು ಕುತೂಹಲಗೊಂಡು ಅವರುಗಳ ನಾಡಿ ಹಿಡಿದು ಪರೀಕ್ಷೆ ಮಾಡಿ "ಮೂರ್ಛೆ ತಪ್ಪಿದವರಂತೆ ಇದೆ ಇವರ ಸ್ಥಿತಿ" ಎಂದು ಉದ್ಗಾರ ತೆಗೆದರು. ಶ್ರೀರಾಮಕೃಷ್ಣರು ಶಿಷ್ಯರ ಎದೆಯನ್ನು ನೇವರಿಸುತ್ತ ಭಗವನ್ನಾಮವನ್ನು ಉಚ್ಚಾರ ಮಾಡಿದಾಗ ಅವರು ಮತ್ತೆ ಮೊದಲಿನಂತಾದರು. ಇದನ್ನು ಕಂಡ ಸರ್ಕಾರರು ನುಡಿದರು, "ಇದೆಲ್ಲ ನಿಮ್ಮ ಲೀಲೆಯ ಪ್ರಭಾವ ಅಂತ ಕಾಣುತ್ತದೆ." ಆಗ ಶ್ರೀರಾಮಕೃಷ್ಣರು, "ಇದೆಲ್ಲ ಆಗುತ್ತಿರುವುದು ಭಗವದಿಚ್ಛೆಯಿಂದಲೇ.. ಈ ಹುಡುಗರ ಮನಸ್ಸು ಹಣ, ಹೆಂಡತಿ, ಕೀರ್ತಿ ಇವುಗಳಲ್ಲಿ ಸಿಕ್ಕಿಕೊಂಡಿಲ್ಲ. ಆದ್ದರಿಂದ ಭಗವಂತನ ಗುಣಮಹಿಮೆಗಳನ್ನು ಕೇಳಿದೊಡನೆ ಅವನಲ್ಲಿ ತನ್ಮಯರಾಗಿಬಿಡುತ್ತಾರೆ" ಎಂದರು **(ಶ್ರೀರಾಮಕೃಷ್ಣ ಲೀಲಾಪ್ರಸಂಗ,** ೧೯೬೪, ಮೂರನೇ ಸಂಪುಟ, ೪ನೇ ಭಾಗ ಪು. ೨೪೭–೨೪೮).

ಆ) ಗಂಟಲನೋವಿಗೆ ಚಿಕಿತ್ಸೆ ಪಡೆಯುತ್ತಿದ್ದಾಗ ಅನೇಕ ಸಂದರ್ಭಗಳಲ್ಲಿ ನರೇಂದ್ರನಾಥನ (ಮುಂದೆ ಸ್ವಾಮಿ ವಿವೇಕಾನಂದರು) ಹಾಡುಗಾರಿಕೆಯನ್ನು ಪರಮಹಂಸರು ಸವಿಯುತ್ತಿದ್ದರು. ಒಂದು ಸಾರಿ ಶ್ರೀರಾಮಕೃಷ್ಣರು ಶ್ಯಾಮಪುಕುರದ ಮನೆಯಲ್ಲಿ (ಅಂದರೆ ಕಾಶಿಪುರದ ತೋಟಕ್ಕೆ ಬರುವ ಮುನ್ನ) ಇದ್ದಾಗ ಅವರ ಅಪೇಕ್ಷೆಯಂತೆ ನರೇಂದ್ರ ಹಾಡಲಾರಂಭಿಸಿದ. ಪರಮಹಂಸರು ಅದನ್ನು ಕೇಳುತ್ತಾ ಭಾವಾತಿಶಯದಿಂದ ಸಮಾಧಿಸ್ಥರಾದರು. ಡಾ. ಸರ್ಕಾರರು ಕೂಡ ಉಕ್ಕಿ ಹರಿಯು

ತ್ತಿದ್ದ ಭಾವಪ್ರವಾಹದಲ್ಲಿ ಸಿಲುಕಿಕೊಂಡು ಮೈಮರೆತರು. ಇದು ಬಹಳ ಹೊತ್ತಿನವರೆಗೆ ನಡೆಯಿತು. ನರೇಂದ್ರ ಹಾಡುವುದನ್ನು ನಿಲ್ಲಿಸಿದ. ಡಾಕ್ಟರಿಗೆ ಎಚ್ಚರವಾಯಿತು. ಆಗ ರಾಮಕೃಷ್ಣರು ನಗುತ್ತಾ ಎದ್ದು ನಿಂತರು. ಆದರೆ ಆಶ್ಚರ್ಯಕರ ರೀತಿಯಲ್ಲಿ ಇದ್ದಕ್ಕಿದ್ದಂತೆ ಮತ್ತೆ ಸಮಾಧಿಸ್ಥರಾದರು. ದೃಷ್ಟಿ ಸ್ಥಿರವಾಗಿದೆ, ಮುಖದಲ್ಲಿ ಮಂದಹಾಸ, ಮೈಕೂದಲೆಲ್ಲ ನಿಮಿರಿ ನಿಂತಿವೆ. ಆದರೆ ಶರೀರ ನಿಷ್ಪಂದವಾಗಿದೆ, ಉಸಿರಾಟ ನಿಂತಿದೆ, ಜೀವ ಇರುವ ಯಾವ ಚಿಹ್ನೆಗಳೂ ಕಂಡುಬರುತ್ತಿಲ್ಲ.

ಶಿಲಾವಿಗ್ರಹದಂತೆ ಅಚಲರಾಗಿ ನಿಂತ ರಾಮಕೃಷ್ಣರನ್ನು ನೋಡಿ ಸರಕಾರ್ ಬೆರಗಾದರು. ಅವರ ಜೊತೆಗೆ ಮತ್ತೊಬ್ಬ ಡಾಕ್ಟರ್ ಬಂದಿದ್ದರು. ಇಬ್ಬರೂ ಪರಮಹಂಸರ ಶರೀರವನ್ನು ವೈಜ್ಞಾನಿಕವಾಗಿ ಪರೀಕ್ಷಿಸತೊಡಗಿದರು. ಸರಕಾರ್ ತಮ್ಮ ಸ್ಟೆತಸ್ಕೋಪಿನಿಂದ ಅವರ ಎದೆಬಡಿತವನ್ನು ಆಲಿಸಲು ಪ್ರಯತ್ನಿಸಿದರು. ಎಷ್ಟು ಸೂಕ್ಷ್ಮವಾಗಿ ಗಮನಿಸಿದರೂ ಸದ್ದು ಕೇಳಿಬರುತ್ತಿಲ್ಲ! ಅಷ್ಟಕ್ಕೆ ತೃಪ್ತರಾಗದೆ ಜೊತೆಯಲ್ಲಿದ್ದ ಡಾಕ್ಟರ್ ಪರಮಹಂಸರ ಕಣ್ಣುರೆಪ್ಪೆಗಳು ಬಡಿಯುವುವೋ ಇಲ್ಲವೋ ಎಂದು ಪರೀಕ್ಷಿಸಲು ಅವರ ತೆರೆದ ಕಣ್ಣುಗಳನ್ನು ಬೆರಳಿನಿಂದ ಸ್ಪರ್ಶಿಸಿದರು. ಕಣ್ಣುರೆಪ್ಪೆ ಮಿಟುಕಲೇ ಇಲ್ಲ. ಇದನ್ನು ನೋಡಿದ ಸರ್ಕಾರರ ಆಶ್ಚರ್ಯಕ್ಕೆ ಪಾರವೇ ಇಲ್ಲವಾಯಿತು.

ಡಾ. ಸರ್ಕಾರ್ ಸಾಮಾನ್ಯರಲ್ಲ. ಮಾನವನ ಶರೀರ ಮನಸ್ಸುಗಳ ಹೊಂದಾಣಿಕೆಯ ಬಗ್ಗೆ ಅಧ್ಯಯನ ಮಾಡಿ, ಒಂದು ಪುಸ್ತಕವನ್ನು ಬರೆದಿದ್ದವರು. ಆ ಸಮಾಧಿಯ ವಿಚಿತ್ರವನ್ನು ಕಂಡು ಅವಾಕ್ಕಾದರು. ಅದು ಅವರನ್ನು ಗಾಢವಾದ ಆಲೋಚನೆಯಲ್ಲಿ ತೊಡಗಿಸಿತು. "ಹೊರನೋಟಕ್ಕೆ ವ್ಯಕ್ತಿ ಸಂಪೂರ್ಣ ನಿರ್ಜೀವನಾದಂತೆ ತೋರುವಂಥ ಈ ಸ್ಥಿತಿಯ ಬಗ್ಗೆ ಆಧುನಿಕ ವಿಜ್ಞಾನ ಏನನ್ನೂ ಹೇಳಲು ಅಸಮರ್ಥ. ಇದನ್ನು ಕೇವಲ ಮೂರ್ಛೆ ತಪ್ಪಿದ ಸ್ಥಿತಿಯೆಂದು ಭಾವಿಸಿದರೆ ಅದು ಅಸಮರ್ಪಕವಾಗುವುದು. ಏಕೆಂದರೆ ಪಾಶ್ಚಾತ್ಯ ವಿಜ್ಞಾನವಾಗಲಿ ಅಥವಾ ತತ್ವಶಾಸ್ತ್ರವಾಗಲಿ, ಈವರೆಗೆ ವಿವರಿಸಲು ಸಾಧ್ಯವಾಗಿಲ್ಲದ, ಮುಂದೆಯೂ ಸಾಧ್ಯವಿರದ ಅನೇಕ ವಿಷಯಗಳು ಈ ಸೃಷ್ಟಿಯಲ್ಲಿ ಇವೆ" ಎಂದು ಅವರು ಒಪ್ಪಿಕೊಳ್ಳಬೇಕಾಯಿತು.

ಇಂತಹ ವಿಚಾರಶೀಲರಾದ ಡಾ. ಸರ್ಕಾರರು ಕೊಲ್ಕತಾ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯರಾಗಿದ್ದರು. ಕೊಲ್ಕತಾದ ಕಾರ್ಪೊರೇಶನ್ನಿನಲ್ಲಿ ಕಮಿಷನರ್ ಆಗಿದ್ದಾಗ ಮೆಡಿಕಲ್ ಬೋರ್ಡ್‌ನಲ್ಲಿ ಇವರು ಸಲ್ಲಿಸಿದ ಸೇವೆ ಅಮೋಘವಾದದ್ದು. ಕಾಲರಾ, ಪ್ಲೇಗ್ ರೋಗಗಳನ್ನು ಕುರಿತು ಇವರು ಬರೆದ ಪುಸ್ತಕಗಳು ಶ್ರೇಷ್ಠ ಗ್ರಂಥಗಳೆಂದು ಸುಪ್ರಸಿದ್ಧವಾಗಿವೆ. ಇಂತಹ ವ್ಯಕ್ತಿ ಶ್ರೀರಾಮಕೃಷ್ಣರ ಹತ್ತಿರ ವೈದ್ಯರಾಗಿ ಬಂದು ಅವರ ಶಿಷ್ಯರಾಗಿ ಪರಿವರ್ತಿತರಾದರು. ಇದೇ ರಾಮಕೃಷ್ಣರ ಲೋಕೋತ್ತರ ವ್ಯಕ್ತಿತ್ವದ ಪ್ರಭಾವ. ನಾವು ವಿಜ್ಞಾನವನ್ನು ಹಾಗೂ ಸಾಹಿತ್ಯವನ್ನು ಓದಿಕೊಂಡವರೆಂದು ಬೀಗುವುದು ಹಾಗೂ ಆಧ್ಯಾತ್ಮಿಕ ವಿಷಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅವುಗಳನ್ನು ಹೀಗಳೆಯುವುದು ಅತ್ಯಂತ ಮೂರ್ಖತನ. ಡಾ. ಸರ್ಕಾರರ ಜೀವನವೇ ನಮಗೆ ಮಾರ್ಗದರ್ಶನ. ಇವರು ೧೮೭೦ರ ಸುಮಾರಿಗೆ "ವಿಜ್ಞಾನಾನುಷ್ಠಾನ ಸಂಘ (The Association for Cultivation of Science)" ಎಂಬ ಸುಪ್ರಸಿದ್ಧವಾದ ವಿಜ್ಞಾನಸಂಘವನ್ನು ಪ್ರಾರಂಭಿಸಿದರು. ಇದು ಭಾರತದಲ್ಲಿ ವಿಜ್ಞಾನದ ವಿಷಯವಾಗಿ ಪ್ರಪ್ರಥಮವಾಗಿ ಆರಂಭವಾದ ಸಂಸ್ಥೆಯಾಗಿದ್ದು ಈಗ ಬೃಹತ್ ಸಂಸ್ಥೆಯಾಗಿ ಬೆಳೆದಿದೆ.



### ೨. ಹೈಸನ್‌ಬರ್ಗ್ ಡಬ್ಲ್ಯೂ.ಕೆ.

(೧೯೦೧–೭೬)

ಈತ ಜರ್ಮನಿಯ ವಿಜ್ಞಾನಿ ಹಾಗೂ ತತ್ವಜ್ಞಾನಿ. ಆ ಕ್ಷೇತ್ರಗಳಿಗೆ ಇವರ ಕೊಡುಗೆಗಳು ಅಪಾರ. ಕ್ವಾಂಟಮ್ ಮೆಕ್ಯಾನಿಕ್ಸ್‌ನಲ್ಲಿ(Quantum Mechanics) ಮೂಲಭೂತವಾದ ಕೆಲಸವನ್ನು ಮಾಡಿದವರು. ಕ್ವಾಂಟಮ್ ಮೆಕ್ಯಾನಿಕ್ಸ್‌ನಲ್ಲಿ ಅನಿಶ್ಚಯ ತತ್ತ್ವ (Uncertainty Principle), ವಿಶ್ವದ ವಿಕಿರಣಗಳು(Cosmic Rays), ಫೆರೋ ಮ್ಯಾಗ್ನೆಟಿಸಮ್ (Ferro-Magnetism) ಪರಸ್ಪರಾವಲಂಬನೆ, ಪರಸ್ಪರ ಕ್ರಿಯೆ (Interdependence, Mutual Interaction) ಮುಂತಾದವು ಇವರ ಅಮೂಲ್ಯ ಕೊಡುಗೆಗಳು. ವಿಜ್ಞಾನಿಯು ಒಬ್ಬ ಸಾಕ್ಷಿಯಾಗಿದ್ದು (spectator) ಯಾವುದೇ ಒಂದು ವಸ್ತುವನ್ನು ಕುರಿತು ಪ್ರಯೋಗ ಮಾಡುವಾಗ, ಅವನು ತನ್ನದೇ ಆದ ಸೃಜನಶೀಲತೆಯನ್ನು ತೋರಿಸುವುದಲ್ಲದೆ, ಆ ವಸ್ತುವಿನೊಂದಿಗೆ ಕ್ರಿಯಾಶೀಲನಾಗುವವನು ಎಂದು ತೋರಿಸಿ ಎಲ್ಲ ಪರೀಕ್ಷೆಗಳೂ ಸಾಪೇಕ್ಷವೆಂದೂ, ವೀಕ್ಷಿಸುವವನ ಪ್ರಭಾವವಿಲ್ಲದೆ ವಸ್ತುವಿನ ಗ್ರಹಿಕೆ ಅಸಾಧ್ಯವೆಂದೂ ತೀರ್ಮಾನಿಸಿದರು. ವಾಸ್ತವವಾಗಿ ವಸ್ತುವಿನ ನಿಜಸ್ವರೂಪ ನೋಡುಗನಿಗೆ ಗೊತ್ತಾಗುವುದೇ ಇಲ್ಲ ಹಾಗೂ ಪ್ರಯೋಗದ ವಸ್ತು ಮತ್ತು ವೀಕ್ಷಕನ ಸಂಪರ್ಕದಿಂದ ಜನ್ಯವಾದ ಜ್ಞಾನವೇ ನಮಗೆ ದೊರೆಯುವುದು, ಎಂದರು. 'ಅನಿಶ್ಚಯ ತತ್ತ್ವ'ದ ಪ್ರಕಾರ ಸ್ಥಳ, ವೇಗ ಮುಂತಾದ ಭೌತಿಕ ಆಯಾಮಗಳು ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳುತ್ತಲೇ ಇರುವುವು. ಇವುಗಳಲ್ಲಿ ಒಂದರ ಮೌಲ್ಯವನ್ನು ನಿಶ್ಚಯಿಸಲು ಹೊರಟಾಗ ಮತ್ತೊಂದರ ಮೌಲ್ಯದ ಅಸ್ಥಿರತೆ ಹೆಚ್ಚಾಗುವುದು. ಹೀಗಾಗಿ ಒಂದು ನಿಶ್ಚಿತ

ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುವುದಿಲ್ಲ. ಈ ತತ್ವಗಳು ಭೌತ ಶಾಸ್ತ್ರ ವಿದ್ಯಾರ್ಥಿಗಳಿಗೆ ಈಗ ತುಂಬ ಪರಿಚಿತ. ಇವರು ೧೯೩೨ ರಲ್ಲಿ ಭೌತಶಾಸ್ತ್ರದಲ್ಲಿ ನೊಬೆಲ್ ಬಹುಮಾನವನ್ನು ಪಡೆದರು.

ಇಂತಹ ಅದ್ಭುತ ವ್ಯಕ್ತಿಗೆ ಸಂಶೋಧನೆಗಳನ್ನು ಮಾಡಲು ಕಾರಣವಾದ ಅನೇಕ ಪ್ರೇರಕ ಶಕ್ತಿಗಳಲ್ಲಿ ವೇದಾಂತವೂ ಒಂದು ಎಂದು ನಿಶ್ಚಯವಾಗಿ ಹೇಳಲು ಈ ಕೆಳಗಿನ ಘಟನೆಯೇ ಸಾಕ್ಷಿ.

ಇವರು ೧೯೨೯ರಲ್ಲಿ ಕೊಲ್ಕತಾದಲ್ಲಿ ರವೀಂದ್ರನಾಥ ಟಾಗೋರರ ವಿಶೇಷ ಅತಿಥಿಯಾಗಿ ಕೆಲವು ಕಾಲ ತಂಗಿದ್ದರು. ಆಗ ವಿಜ್ಞಾನ, ಭಾರತೀಯ ತತ್ವಶಾಸ್ತ್ರದ ಕುರಿತು ತುಂಬ ಚರ್ಚೆಮಾಡಿದರು. ಅದಕ್ಕಿಂತ ಮೊದಲು ಕೆಲವು ಗಹನವಾದ ವಿಷಯಗಳು ಅಂದರೆ, ಭೌತಿಕ ವಸ್ತುಗಳಲ್ಲಿ ಹಾಗು ಅವುಗಳ ಪರಿಣಾಮದಲ್ಲಿ ಸ್ವಾಭಾವಿಕವಾಗಿರುವ ಅಸ್ಥಿರತೆ (Impermanence of Physical Reality), ಪರಸ್ಪರ ಹೊಂದಾಣಿಕೆಗಳು (Inter-Connectedness) ಸಾಪೇಕ್ಷ ಜಗತ್ತು (Relative World) ಮುಂತಾದವುಗಳು ಆಗಿನ ಭೌತಶಾಸ್ತ್ರದ ವಿಜ್ಞಾನಿಗಳಿಗೆ ಕಬ್ಬಿಣದ ಕಡಲೆಯಾಗಿದ್ದವು ಮತ್ತು ಅವರ ಪಾಲಿಗೆ ಇಂತಹ ವಿಚಾರಗಳು ಹುಚ್ಚರ ವಿಚಾರಗಳಂತಿದ್ದವು.

ಮತ್ತೊಬ್ಬ ಭೌತವಿಜ್ಞಾನಿ ಫ್ರಿಜೋಫ್ ಕ್ಯಾಪ್ರಾ (Fritzof Capra) ಮತ್ತು ಹೈಸೆನ್‌ಬರ್ಗ್‌ರ ನಡುವೆ ಆದಂತಹ ಸಂವಾದವನ್ನು Unknown Wisdom ಎಂಬ ಕ್ಯಾಪ್ರಾರವರ ಮೂರನೇ ಪುಸ್ತಕದಲ್ಲಿ ಕಾಣಬಹುದು. ಕ್ಯಾಪ್ರಾರವರು ತಿಳಿಸುವಂತೆ "ನಾನು (ಕಾಪ್ರಾ) ಅವರನ್ನು ಪೌರಸ್ತ್ಯ ತತ್ವಶಾಸ್ತ್ರದ ಬಗ್ಗೆ ಕೇಳಿದಾಗ ನನಗೆ ತುಂಬಾ ಆಶ್ಚರ್ಯವಾಯಿತು. ಏಕೆಂದರೆ ಅವರ ಪ್ರಕಾರ ಕ್ವಾಂಟಮ್ ಭೌತವಿಜ್ಞಾನ ಹಾಗು ಭಾರತೀಯ ತತ್ವಶಾಸ್ತ್ರಗಳಲ್ಲಿ ತುಂಬ ಹೊಂದಾಣಿಕೆ ಇದೆ. ಅಲ್ಲದೆ ಅವರ ವೈಜ್ಞಾನಿಕ ಸಂಶೋಧನೆಗಳಿಗೆ ಅರೆಪ್ರಜ್ಞಾವಸ್ಥೆಯ ನೆಲೆಯಲ್ಲಿ (Sub-conscious Level) ಅದು ಪ್ರೇರಣೆಯನ್ನು ಕೊಟ್ಟಿದೆ" (ಭಗವದ್ಗೀತಾ, ಭಾಗ ಒಂದು, ೨೦೦೧, ಸ್ವಾಮಿ ರಂಗನಾಥಾನಂದರು, ಪು.[illegible]).

## ೨. ಇರ್ವಿನ್ ಶ್ರೋಡಿಂಗರ್

(೧೮೮೭–೧೯೬೧)



ಇವರು ಮತ್ತೊಬ್ಬ ಕ್ವಾಂಟಮ್ ಭೌತವಿಜ್ಞಾನಿ. ಇವರು ಬರೆದ ಪುಸ್ತಕ ***My View of the World*** ನಲ್ಲಿ (ಜಗತ್ತಿನ ಬಗ್ಗೆ ನನ್ನ ದೃಷ್ಟಿಕೋನ) ಈ ಎರಡು ಪ್ರಬಂಧಗಳಿವೆ: ೧. Seek for the Road—ದಾರಿಯನ್ನು ಹುಡುಕಿ. ಇದನ್ನು ೧೯೨೫ರಲ್ಲಿ ಬರೆದರು. ೨. What is Real?—ಯಾವುದು ಸತ್ಯ—ತಮ್ಮ ಈ ಪುಸ್ತಕದಲ್ಲಿ 'ನಾನು ಯಾರು?' ಎನ್ನುವ ವಿಷಯವನ್ನು ಕುರಿತು ಗಾಢವಾದ ಚಿಂತನೆಗೆ ಓದುಗರನ್ನು ಪ್ರಚೋದಿಸುತ್ತಾರೆ. ಆಗ (೧೯೨೫) ಭೌತವಿಜ್ಞಾನದ ಬೆಳವಣಿಗೆ ಉನ್ನತ ಸ್ಥಿತಿಯಲ್ಲಿತ್ತು. ಆದ್ದರಿಂದ ಅವರ ಮನಸ್ಸಿನಲ್ಲಿ 'ಎಲೆಕ್ಟ್ರಾನ್ ಅಲೆಯ ರೂಪಾಂತರ'ದ (Wave Nature) ಬಗ್ಗೆ ಜಿಜ್ಞಾಸೆ ನಡೆದಿತ್ತು. ಅವರ ಭಾವನೆಗಳಿಗೆ ಅನುಗುಣವಾಗಿ ಎಲೆಕ್ಟ್ರಾನ್ (ಅಂದರೆ ಅಣುವಿನ ಒಂದು ಭಾಗ; ಅದರ ವಿದ್ಯುತ್ ಋಣಾತ್ಮಕವಾದದ್ದು) ಜೀವಕಳೆ ತುಂಬಿಕೊಂಡು ಇವರನ್ನು 'ನನ್ನನ್ನು ತಿಳಿಯಲು ನೀನಾರು?' ಎಂದು ಪ್ರಶ್ನಿಸಿದಂತೆ ಭಾಸವಾಯಿತು.

ಅವರ ಈ ತೆರನಾದ ವಿಚಾರಗಳು (ಎಲೆಕ್ಟ್ರಾನ್ ಹಾಗೂ ಅವರ ಮನಸ್ಸು) ಎಲೆಕ್ಟ್ರಾನಿನ ಚಿಹ್ನೆಯಾದ 'ಸೈ'ಯನ್ನು (psi) ಹಾಗೂ ವೇವ್‌ಕಾರ್ಯದ ಚಿಹ್ನೆಯಾದ 'ಫೈ' (Phi) ಮುಂತಾದವುಗಳ ಸಂಶೋಧನೆಗೆ ಕಾರಣವಾಗಿರಬಹುದು ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಫೈ ಹಾಗೂ ಸೈಗಳು ಆಧುನಿಕ ಗಣಿತಶಾಸ್ತ್ರದಲ್ಲಿ ಬರುವ ಗಣಿತದ ಸಂಕೇತಗಳು. ಅವುಗಳನ್ನು ಭೌತಶಾಸ್ತ್ರದಲ್ಲಿ ಎಲೆಕ್ಟ್ರಾನ್, ಪ್ರೋಟಾನ್ ಮೊದಲಾದ ಮೂಲ ಭೂತವಸ್ತುಗಳ ವಿವರಣೆಗೆ ಈಗಲೂ ಉಪಯೋಗಿಸುತ್ತಿರುವರು.

ತಮ್ಮ ಈ ಎರಡು ಪ್ರಬಂಧಗಳನ್ನು ಶ್ರೋಡಿಂಗರ್ ೧೯೬೧ ರಲ್ಲಿ ಮೊತ್ತಮೊದಲು ಪ್ರಕಟಿಸಿದರು. ಆಗ ಕೆಲವು ಸ್ನೇಹಿತರು ೧೯೨೫ರಲ್ಲಿ ಬರೆದ ಪ್ರಬಂಧವನ್ನು ಇಷ್ಟೊಂದು ತಡವಾಗಿ ಪ್ರಕಟಿಸಿದ್ದರ ಬಗ್ಗೆ ಪ್ರಶ್ನಿಸಿದಾಗ ಅವರು ಕೊಟ್ಟ ಉತ್ತರ ತುಂಬಾ ಮಾರ್ಮಿಕವಾಗಿದೆ. "ಆ ಪ್ರಬಂಧದಲ್ಲಿ ಬರುವ ವಿಚಾರಗಳು ಆಗಿನ ಪಾಶ್ಚಾತ್ಯ ಜಗತ್ತಿಗೆ ತೀರ ಹೊಸದಾಗಿದ್ದುದೇ ಇದಕ್ಕೆ ಕಾರಣ." ಮತ್ತೆ ಶ್ರೋಡಿಂಗರ್ ಬರೆಯುತ್ತಾರೆ, "ಈ ಜಾಗದಲ್ಲಿ ಸುಮಾರು ನೂರು ವರ್ಷಗಳ ಹಿಂದೆ ಮತ್ತೊಬ್ಬ ಮನಷ್ಯನು ಕುಳಿತಿದ್ದನು, ಅವನು ನನ್ನಂತೆಯೇ ತನ್ನ ತಂದೆತಾಯಿಗಳಿಗೆ ಹುಟ್ಟಿದವನಾಗಿರಬೇಕು, ನಿಮ್ಮಂತೆಯೆ ಸುಖದುಃಖಗಳನ್ನು ಅನುಭವಿಸಿರಬೇಕು. ಅವನಾರು? ನಿಮ್ಮ ಆತ್ಮವಾಗಿರಲು ಸಾಧ್ಯವೇ? ಅದು ನೀವಾಗಿರಬಹುದಾದ ಸಾಧ್ಯತೆಯಿಲ್ಲವೆ?" ಇತ್ಯಾದಿ ವಿಚಾರ ಮಾಡುತ್ತಿರುವಾಗ ವೇದಾಂತದ ಮೂಲಭೂತ ತತ್ವದ 'ತತ್ವಮಸಿ'ಯ ಪ್ರಕಾರ 'ನೀನಾಗಿರಲು ಸಾಧ್ಯ' ಎಂಬ ವಿಚಾರಕ್ಕೆ ಬರುತ್ತಾರೆ. ಅಥವಾ, 'ಪೂರ್ವದಲ್ಲಿ ನಾನು, ಪಶ್ಚಿಮದಲ್ಲಿ ನಾನು, ಮೇಲೆ ನಾನು, ಕೆಳಗೆ ನಾನು, ಇತ್ಯಾದಿ...... 'ನಾನು ಸರ್ವ ಜಗತ್ತು'' (ಅಹಂ ಬ್ರಹ್ಮಾಸ್ಮಿ) ಎಂಬ ತತ್ವ ಪ್ರತಿಪಾದನೆಯ ಬಗ್ಗೆ ತುಂಬಾ ಸ್ವಾರಸ್ಯಕರವಾಗಿ ಬರೆಯುತ್ತಾರೆ. ಮುಂದುವರಿದು "ಈ ತತ್ವಗಳು ಮನುಷ್ಯನಿಗೆ ಅರಿವಿಲ್ಲದಂತೆ ಅವನ ಪ್ರತಿಯೊಂದು ಕ್ರಿಯೆಗೆ ಒಳಮನಸ್ಸಿನ ಆಯಾಮದಲ್ಲಿ (Sub-conscious Level) ಪ್ರೇರಣೆ ನೀಡುತ್ತಲೇ ಇರುತ್ತವೆ.

ನೈತಿಕತೆ ಇದಕ್ಕೆ ಆಧಾರ." (ಭವನ್ಸ್ ಜರ್ನಲ್, ಆಗಸ್ಟ್, ೧೯೮೨, ಪುಟ ೧೨೯) ಇಂತಹ ಮೇರು ಪ್ರತಿಭೆಯ ವಿಜ್ಞಾನಿಯ ಕಿರು ಪರಿಚಯ ಇಲ್ಲಿದೆ:

೧೮೮೭ರಲ್ಲಿ ಆಸ್ಟ್ರಿಯಾದ ವಿಯನ್ನಾದಲ್ಲಿ ಹುಟ್ಟಿದ ಇವರು ಐನ್‌ಸ್ಟೈನ್, ನ್ಯೂಟನ್, ಬ್ಹೋರ್ ಮುಂತಾದ ಶ್ರೇಷ್ಠ ವಿಜ್ಞಾನಿಗಳ ಸಾಲಿಗೆ ಸೇರಿದವರು. ಅದರೊಂದಿಗೆ ಇವರೊಬ್ಬ ತತ್ತ್ವಜ್ಞಾನಿಯೂ ಕೂಡ. ತತ್ತ್ವಜ್ಞಾನ ಹಾಗೂ ವಿಜ್ಞಾನದ ಎಲ್ಲ ವಿಭಾಗಗಳಲ್ಲಿ ಕೆಲಸಮಾಡಿದ ಕೀರ್ತಿ ಇವರಿಗೆ ಸಲ್ಲುವುದು. ಇವರೊಬ್ಬ ವೇದಾಂತಿಯೆಂದು ವಿಶ್ವಕೋಶವೂ (ಸಂ. ೧, ಪುಟ. ೩೬೦–೬೧, ೧೯೭೮) ಸಹ ಬಣ್ಣಿಸುತ್ತದೆ. ವೇದಾಂತ ಹಾಗೂ ತತ್ತ್ವಜ್ಞಾನಗಳ ಈ ಮಹಾನ್ ವಿಜ್ಞಾನಿ ಹುಟ್ಟದೇ ಇದ್ದಿದ್ದರೆ ವಿಜ್ಞಾನ ಇನ್ನೂ ಕುಂಟುತ್ತಲೇ ಸಾಗುತ್ತಿತ್ತೇನೋ ಎನ್ನುವ ಪರಿಕಲ್ಪನೆ ಪ್ರತಿಯೊಬ್ಬ ಭೌತಶಾಸ್ತ್ರದ ಪದವೀಧರನಿಗೆ ಬಂದಿರಲಿಕ್ಕೆ ಸಾಕು. ೧೯೩೩ರಲ್ಲಿ ಭೌತಶಾಸ್ತ್ರಕ್ಕೆ ನೀಡಿದ ಅಪರೂಪದ ಕೊಡುಗೆಗಾಗಿ ನೊಬೆಲ್ ಪಾರಿತೋಷಕವನ್ನು ಇವರು ಪಡೆದರು.



### ೪. ಆಲ್ಬರ್ಟ್ ಐನ್‌ಸ್ಟೈನ್

(೧೮೭೯–೧೯೫೫)

ಇವರು ಈಗಿನ ಕಾಲದ ಸಾಮಾನ್ಯ ವ್ಯಕ್ತಿಗೂ ಚಿರಪರಿಚಿತರು. $E=mc^2$ ಎಂಬ ಸೂತ್ರದ ಪ್ರತಿಪಾದಕರು. ಅಂದರೆ ಪ್ರತಿಯೊಂದು ಅಣುವಿನಲ್ಲಿ ಅಪಾರ ಶಕ್ತಿ ಅಡಗಿದೆ ಎಂಬ ಅಂಶವನ್ನು ಜಗತ್ತಿನ ಗಮನಕ್ಕೆ ತಂದಂತಹ ವಿಜ್ಞಾನಿ, ಮೇಧಾವಿ ಹಾಗೂ ವೇದಾಂತಿ. ಇದರ ಮನವರಿಕೆ ಅವರ ಮಾತುಗಳಲ್ಲಿಯೇ ಆಗುವುದು. ತೀವ್ರ ಅನಾರೋಗ್ಯದಿಂದ ಸಾಯುವ ಸಮಯದಲ್ಲಿದ್ದಾಗ ಇವರನ್ನು "ನೀವು ಸಾವಿಗೆ ಅಂಜುವುದಿಲ್ಲವೇ?" ಎಂದು ಕೆಲವರು ಪ್ರಶ್ನಿಸಿದರು. ಅದಕ್ಕೆ ಅವರು ನೀಡಿದ ಉತ್ತರ: "ಈ ಚೈತನ್ಯಮಯ ಜಗತ್ತಿನಲ್ಲಿ ನಾನೆಷ್ಟು ದೃಢಚಿತ್ತ ಮನೋಭಾವವನ್ನು ಹೊಂದಿದ್ದೇನೆಂದರೆ, ಯಾವುದೇ ವ್ಯಕ್ತಿ ಎಲ್ಲಿ ಹುಟ್ಟಿ, ಎಲ್ಲಿ ಸಾಯುತ್ತಾನೆಂದು ನಾನು ಯೋಚಿಸುವುದೇ ಇಲ್ಲ. ಅಲ್ಲದೆ ಈ ಜಗತ್ತಿನಲ್ಲಿ ತಕ್ಷಣ ತ್ಯಜಿಸಲಾರದಂತಹದ್ದೇನೂ ಇಲ್ಲ." ಇಂತಹ ಉನ್ನತ ಮಟ್ಟದ ಉತ್ತರವನ್ನು ನೀಡುವುದು ಒಬ್ಬ ನೈಷ್ಠಿಕ ವೇದಾಂತಿಗೆ ಮಾತ್ರ ಸಾಧ್ಯ. ಇವರ ಮತ್ತೊಂದು ದೃಷ್ಟಿಕೋನವೆಂದರೆ, ಗಣಿತ ಹಾಗೂ ಭೌತಶಾಸ್ತ್ರದಲ್ಲಿನ ಪ್ರಯೋಗಗಳಿಂದ ಅಣುವಿನ ಇರುವಿಕೆಯ ಬಗ್ಗೆ ಮಾಹಿತಿ ದೊರೆಯುತ್ತದೆ. ಅಂದರೆ ಹೊರಜಗತ್ತಿನ ಅಧ್ಯಯನಕ್ಕೆ ಈ ಪ್ರಯೋಗಗಳು ಮುಖ್ಯ. ಅದರಂತೆ ಸ್ವನಿಯಂತ್ರಣ, ನೈತಿಕ ಪ್ರಯೋಗಗಳ ಮುಖಾಂತರ ಆತ್ಮಜ್ಞಾನ, ವಿಮುಕ್ತಿಗಳ ಅರಿವು ವ್ಯಕ್ತಿಗೆ ದೊರೆಯುತ್ತದೆ. ಭೌತಿಕ ಪ್ರಯೋಗಗಳಿಗೆ ಈ ಪ್ರಪಂಚದಲ್ಲಿ ಯಾವ ಸ್ಥಾನ ಇವೆಯೋ, ಅದೇ ಸ್ಥಾನವನ್ನು ನೈತಿಕ ಪ್ರಯೋಗಗಳು ಆಂತರಿಕ ಜಗತ್ತಿನಲ್ಲಿ ಹೊಂದಿವೆ. ಮುಂದುವರಿದು ಐನ್‌ಸ್ಟೈನ್ ಹೇಳುತ್ತಾರೆ: "ದೇವರು ಅಥವಾ ಆತ್ಮದ ಅಸ್ತಿತ್ವವನ್ನು ತರ್ಕ (Logic) ಅಥವಾ ಜಿಜ್ಞಾಸೆಯ (reason) ಮೂಲಕ ಸಿದ್ಧಪಡಿಸುವುದಾಗಲಿ, ತಿರಸ್ಕರಿಸುವುದಾಗಲಿ (disprove) ಸಾಧ್ಯವಿಲ್ಲ. ಇದು ಪ್ರಶ್ನಾತೀತ. ಯಾವುದೇ ವಿಚಾರವು ಊಹೆಗಳಿಂದ (postulates) ಮತ್ತು ಕೆಲವು ಅನಿರ್ದಿಷ್ಟ (unidentified) ನಿಬಂಧನೆಗಳಿಂದ ಪ್ರಾರಂಭ ಆಗಲೇಬೇಕು. ಇಲ್ಲವಾದಲ್ಲಿ ಆ ಊಹೆಗಳು ತಮ್ಮ ಸ್ಥಾನದಿಂದ ತಾವೇ ಬಿದ್ದುಹೋಗುತ್ತವೆ. ಒಳ್ಳೆಯದು–ಕೆಟ್ಟದ್ದು ಅಥವಾ ಸರಿ–ತಪ್ಪುಗಳ ನಡುವಿನ ಅಂತರವನ್ನು ವಿವರಿಸಲು ವಿಜ್ಞಾನದಿಂದ ಸಾಧ್ಯವಿಲ್ಲ. ಅದಕ್ಕಾಗಿ ವಿಜ್ಞಾನಗಳ ಮತ್ತು ಕಾರಣಗಳ ಅವಶ್ಯಕತೆ ಇಲ್ಲ, ಇತ್ಯಾದಿ. (ಭವನ್ಸ್ ಜರ್ನಲ್, ಆಗಸ್ಟ್, ೧೯೮೨, ಪುಟ ೧೮೫). ಐನ್‌ಸ್ಟೈನ್‌ರ ಪ್ರಕಾರ ಭೌತಶಾಸ್ತ್ರದ ಭಾಷೆಯಲ್ಲಿ ಹೇಳುವುದಾದರೆ ದ್ರವ್ಯ ಮತ್ತು ಶಕ್ತಿಗಳು ಒಂದೇ ವಸ್ತುವಿನ ವಿವಿಧ ರೂಪಗಳು. ಶಕ್ತಿಯು ಸಂಕುಚಿತಗೊಂಡಾಗ ಆಗುವ ಸ್ಥಿತಿಯನ್ನು ದ್ರವ್ಯವೆಂದು ಕರೆಯುತ್ತೇವೆ. (ಭಗವದ್ಗೀತೆ, ಸ್ವಾಮಿ ರಂಗನಾಥಾನಂದ, ಜುಲೈ ೨೦೦೦, ಸಂ.೧, ಪುಟ.೧೨೩).

ಇತ್ತೀಚೆಗೆ ವಿಜ್ಞಾನಿಗಳು ಅವ್ಯಕ್ತ ದ್ರವ್ಯದ (Dark Matter) ಬಗ್ಗೆ ಮಾತನಾಡುತ್ತಿದ್ದಾರೆ (Indian Association for Physics Teachers Journal, Mar-May 2001). ಇದರ ಬಗ್ಗೆ ವೇದಾಂತಿಗಳು ಏನು ಹೇಳುವರು ಎಂಬುದನ್ನು ಕಾದು ನೋಡುವ ಕುತೂಹಲ ಪ್ರತಿಯೊಬ್ಬನಿಗೂ ಇರುವುದು ಸಹಜವೇ.

ಸ್ವಾಮಿ ವಿವೇಕಾನಂದರ ಅಭಿಪ್ರಾಯದಂತೆ, "ಭಾರತೀಯರಾದ ನಾವು ವಿಜ್ಞಾನ ಹಾಗೂ ತಂತ್ರಜ್ಞಾನಗಳಿಗಾಗಿ ಪಶ್ಚಿಮದ ಕಡೆಗೆ ನೋಡುತ್ತಿರಬೇಕು. ಪಾಶ್ಚಾತ್ಯರು ತತ್ತ್ವಜ್ಞಾನ ಮತ್ತು ಧರ್ಮದ ಬಗ್ಗೆ ಭಾರತದತ್ತ ನೋಡುತ್ತಿರಬೇಕು. ಈ ರೀತಿ ಪರಸ್ಪರ ವಿಚಾರವಿನಿಮಯಗಳಿಂದ ಜಗತ್ತು ಬೆಳೆಯಲು ಸಾಧ್ಯ." ಈ ಆಧುನಿಕ ಯುಗದಲ್ಲಿ ವರ್ಷಗಳುರುಳಿದಂತೆ—ಶ್ರೀರಾಮಕೃಷ್ಣ ವಿವೇಕಾನಂದರ ಆವಿರ್ಭಾವದ ಫಲವೇನೋ ಎಂಬಂತೆ—ಅನುಭಾವಿ ವಿಜ್ಞಾನಿಗಳ ಚಿಂತನೆಯಿಂದಾಗಿ ವಿಜ್ಞಾನವೆಂಬ ನದಿಯು, ವೇದಾಂತದ ಸಾಗರವನ್ನು ಸೇರಲು ಗಂಗೆಯಂತೆ ಧಾವಿಸುತ್ತಿದೆಯೇನೋ ಎಂಬಂತೆ ಭಾಸವಾಗುವುದು.